ನಮ್ಮೆಡೆಗೆ ಕಿರುಗಣ್ಣು ಹಾಯಿಸುತ್ತ, ಅಲ್ಲಿಲ್ಲಿ ನೆಲಕೆರೆದು ನಡೆಯುತ್ತಿದ್ದ ಚರ್ಚಿಲ್, ಆ ದಿನ ನೆಲ ಮೂಸುವ ಕೆಲಸದಲ್ಲಿ ಮೈಮರೆತು ಎಲ್ಲಿ ಕಳೆದು ಹೋದನೋ! ಹಾಗೆ ಅವನು ಕಳೆದುಹೋಗಿದ್ದಾಗಲೇ ಅಣ್ಣ, ನನಗೆ ಮತ್ತು ನನ್ನ ತಮ್ಮನಿಗೆ ಕಾಲೇಜಿನ ದೊಡ್ಡದೊಡ್ಡ ಕಂಬಗಳ ಹಿಂದೆ ಅವಿತುಕೊಳ್ಳುವಂತೆ ಹೇಳಿದರು. ತನ್ನ ವಾಸನಾಪ್ರಪಂಚದಿಂದ ಮರಳಿ ವಾಸ್ತವಕ್ಕೆ ಬಂದ ಚರ್ಚಿಲ್ ಕತ್ತೆತ್ತಿ ನೋಡಿದರೆ ಅಲ್ಲಿ ನಾವು ಯಾರೂ ಇರಲಿಲ್ಲ. ಯಾರೂ ಕಾಣದಿದ್ದರಿಂದ ಗಾಬರಿಯಾಗಿ ಒಮ್ಮೆ ಜೋರಾಗಿ ನೆಲಕೆರೆದು 'ಗುರ್ರ...' ಅನ್ನುತ್ತಿದ್ದಾಗ ಅಣ್ಣ ಒಂದು ಕಂಬದ ಮರೆಯಿಂದ ಅವನ ಹೆಸರು ಕೂಗಿದರು. ಅವನು ಖುಷಿಯಲ್ಲಿ ದನಿ ಕೇಳಿದ ಕಡೆಗೆ ಓಡತೊಡಗಿದ. ಅಣ್ಣ ಹೇಳಿಕೊಟ್ಟ ಹಾಗೆ, ಎದುರು ಕಂಬದ ಮರೆಯಲ್ಲಿ ನಿಂತಿದ್ದ ನಾನು ತಕ್ಷಣ ಅವನ ಹೆಸರು ಕೂಗಿದೆ. ಚರ್ಚಿಲ್ ಗಮನ ನನ್ನ ದನಿಯ ಕಡೆ ಹೋಯಿತು. ನನ್ನನ್ನು ಅನುಸರಿಸಿ ನನ್ನ ತಮ್ಮ ಕೂಗಿದ. ಬೇರೆ ಬೇರೆ ದಿಕ್ಕಿನಿಂದ ಹೊರಡುತ್ತಿದ್ದ ದನಿಗಳನ್ನು ಅರಸಿ, ಎತ್ತ ಕಡೆ ಹೋಗುವುದೆಂದು ಯಾವೊಂದು ನಿರ್ಧಾರವನ್ನೂ ಮಾಡಲಾಗದೆ ಉದ್ವೇಗಕ್ಕೆ ಬಿದ್ದ ಚರ್ಚಿಲ್ ಆ ಕಂಬಗಳ ಕಡೆಗೆ ಓಡಿ ಬಂದ. ನಾವು ಅವನಿಗೆ ಕಾಣದಂತೆ ದಪ್ಪ ಕಂಬದ ಇನ್ನೊಂದು ಬದಿಗೆ ಹೊರಳಿ ನಿಂತೆವು. ಯಾರೂ ಕಾಣದಿದ್ದ ಭಯಕ್ಕೋ, ಆತಂಕಕ್ಕೋ ಅವನು ಒಮ್ಮೆ ಜೋರಾಗಿ ಕೂಗಿದ. ನಿರ್ಜನ ಕಾರಿಡಾರಿನಲ್ಲಿ ಅವನ ಧ್ವನಿ ಪ್ರತಿಧ್ವನಿಸಿ, ತನ್ನ ದನಿಗೆ ತಾನೇ ಗಾಬರಿಗೊಂಡು ಅವನು ಚಾವಣಿ ಕಡೆ ನೋಡುತ್ತ ಮತ್ತೆ ಬೊಗಳಿದ. ಕಡೆಗೆ ತನ್ನ ಆದಿಶಕ್ತಿಯಾದ ವಾಸನೆಯಿಂದಲೇ ಚರ್ಚಿಲ್ ನಮ್ಮನ್ನು ಹುಡುಕಿದ!

ಸೃಷ್ಟಿಕ್ರಿಯೆಯಲ್ಲಿ ಒಂದು ಧ್ವನಿಯು ಮತ್ತೊಂದು ಧ್ವನಿಯ ಜೊತೆಗೆ ಸೇರುತ್ತ ಪ್ರತಿಧ್ವನಿಸುತ್ತ ತೋರ್ಪಡುತ್ತದೆ ಎಂಬ ಸಂಗತಿಗೆ ರೂಪಕವಾಗಿ ಆ ಅನುಭವವು ಈಗ ನನಗೆ ಕಾಣುತ್ತದೆ. ಕವಿಯಲ್ಲಿ ಒಂದು ಧ್ವನಿಯು ಮತ್ತೊಂದರೊಡನೆ ಬೆರೆತು, ಸಂವೇದನೆಯಾಗಿ ರೂಪಾಂತರಗೊಂಡು ಕವಿತೆ ಒಡಮೂಡುತ್ತದೆ. ಮೇಲುಗಡೆಯೇ ಕಾಣುವ ಕಂಪನಗಳು ಭೂಮಿಯ ಆಳದಲ್ಲಿ ಹುದುಗಿರುವ ಕಂಪನಗಳ ಜೊತೆ ಬೆಸೆಯತೊಡಗುವುದೆಂದರೆ, ತುಟಿಮೇಲಿನ ಮಾತು ಎದೆಯಾಳದ ಮಾತಾಗಿ, ಆ ಮಾತೇ ಸಾವಿರಾರು ವರ್ಷಗಳ ಪರಂಪರೆಯಿರುವ ಭಾಷಿಕ ಜಗತ್ತಿನೊಳಗೆ ಅಡಿಯಿಡುತ್ತಿದ್ದೇನೆನ್ನುವ ಎಚ್ಚರ ಮತ್ತು ಪ್ರಜ್ಞೆಗೆ ಕಾರಣವಾಗುತ್ತದೆ. ಹೀಗೆಲ್ಲ ಅನ್ನಿಸುವ ಹೊತ್ತಿಗೆ, ಮನಸ್ಸು ಆ ದಿನಗಳ ಸುತ್ತ ಅಲೆದಾಡಲು ತೊಡಗಿದಾಗ ಬರೆದ ಕವಿತೆಯೊಂದು ನೆನಪಾಯಿತು:

## ಅಪ್ಪ...

ಪ್ರತಿ ಸಂಜೆಯೂ ನಾವು ನಿನ್ನ ಹಿಂದ್ಹಿಂದೆ
ನಡೆಯುತ್ತ, ಓಡುತ್ತ ಓಡುತ್ತೋಡುತ್ತ ನಡೆದು
ತಲುಪುತ್ತಿದ್ದೆವು ಊರಾಚೆಯ ಬಯಲ,
ಒಮ್ಮೊಮ್ಮೆ ಆ ಬಯಲನ್ನೂ ದಾಟಿ ಸಾಗುತ್ತಿತ್ತು ನಮ್ಮ ದಾರಿ.

ನಿನ್ನನ್ನು ಹಿಡಿಯಲು ಓಡುವುದರಲ್ಲೆ ನಮ್ಮ ನಿರಂತರ ಕಲಿಕೆ;
ಸೂರ್ಯನ ಅಸ್ತಮದ ಹೊತ್ತು ಮಾತ್ರ ಎಲ್ಲ ಮೌನ
ನಮ್ಮ ನಾಯಿ 'ಚರ್ಚಿಲ್' ಕೂಡ!